ದಿನಾಂಕಃ 17.04.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಅರ್ಜಿದಾರರ ಪರ ವಕೀಲರಿಂದ :**

ನಾನು 9ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ಪ್ರಕರಣದಲ್ಲಿ ನೀವು ಏನು ತಕರಾರು ಹಾಕಿರುತ್ತೀರಾ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತದೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನಮ್ಮ ತಂದೆಯ ತಂದೆಯ ಹೆಸರು ಮಾಫಿ ಕರೀಗೌಡ. ನನ್ನ ತಂದೆಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳು. ಅವರ ಹೆಸರು ನಾಗರತ್ನ, ದೇವರಾಜು, ಇಂದ್ರಮ್ಮ ಹಾಗೂ ಲೋಕೇಶ್. 2ನೇ ಎದುರುದಾರರಾದ ಸಾಗರ್ ರವರು ನನ್ನ ತಂಗಿ ಇಂದ್ರಮ್ಮರವರ ಮಗ. ನನ್ನ ತಂದೆಯ ಜೀವಿತಾಕಾಲದಲ್ಲಿ ಈ ಅಪಘಾತವಾಗಿರುತ್ತದೆ ಎಂದರೆ ಸರಿ.

**2.** ದಿನಾಂಕಃ 10.04.2018 ರಂದು ಎದುರುದಾರರು ಸದರಿ ಲಾರಿಯನ್ನು ಖರೀದಿಸಿದ ಬಗ್ಗೆ ನ್ಯಾಯಾಲಯಕ್ಕೆ ನಾನು ದಾಖಲೆ ಹಾಜರುಪಡಿಸಿಲ್ಲ. ನಾನು ಹೇಳಿರುವಂತೆ ವಾಹನವನ್ನು ಮಾರಾಟ ಮಾಡದ ಕಾರಣ ಸದರಿ ಮಾರಾಟಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಮಾರಾಟವಾಗಿದ್ದರೇ ಅಷ್ಟರಲ್ಲಾಗಲೇ ಆರ್.ಸಿ.ಯಲ್ಲಿ 2ನೇ ಎದುರುದಾರರ ಹೆಸರು ನಮೂದಾಗುತ್ತಿತ್ತು ಎಂದರೆ ಸರಿಯಲ್ಲ.

**3.** ನನ್ನ ತಂದೆಗೆ 2.5 ಯಿಂದ 3 ಎಕರೆ ಜಮೀನು ಇರುತ್ತದೆ. ನನ್ನ ತಂದೆಗೆ 4-5 ಎಕರೆ ಜಮೀನು ಇರುತ್ತದೆ ಎಂದರೆ ಸುಳ್ಳು. ಈಗ ನೋಡುತ್ತಿರುವ ಮ್ಯುಟೇಷನ್

ನನ್ನ ತಂದೆಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ಎಂ.ವಿ.ಸಿ.ನಂ.707/2019 ರಲ್ಲಿ ನಿಪಿ-16 ಎಂದು ಗುರುತಿಸಲಾಗಿದೆ. ನನ್ನ ತಂದೆಯ ಮರಣಾನಂತರ ಅವರ ಹೆಸರಿನಲ್ಲಿದ್ದ ಆಸ್ತಿಯ ಪಹಣಿಗಳು ಮ್ಯುಟೇಷನ್ ಮೂಲಕ ಬದಲಾಗಿರುತ್ತವೆ ಎಂದರೆ ಸರಿ. ನನ್ನ ಮಗನ ಹೆಸರು ಪ್ರವೀಣ್ ಕುಮಾರ್. ಈಗ ನೋಡುತ್ತಿರುವ ಪಹಣಿ ಪತ್ರದ ಆಸ್ತಿಯನ್ನು ಅಪಘಾತವಾದ ನಂತರ ನನ್ನ ಮಗನಿಗೆ ದಾನಪತ್ರದ ಮೂಲಕ ನೀಡಿರುತ್ತಾರೆಂದರೆ ಸಾಕ್ಷಿ ದಾಖಲೆಯನ್ನು ನೋಡಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆ ದಾಖಲೆಯನ್ನು ನೀಡಿ ನಿಮಗೆ ಓದಲು ಬರುತ್ತದೆಯೇ ಎಂದರೆ ಸಾಕ್ಷಿ ಸ್ವಲ್ಪ ಬರುತ್ತದೆ ಎನ್ನುತ್ತಾರೆ. ಈಗ ನೋಡುತ್ತಿರುವ ಪಹಣಿಯಲ್ಲಿ ನನ್ನ ಮಗನ ಹೆಸರು ಇರುತ್ತದೆ ಎಂದರೆ ಸರಿ. ಈಗ ನೋಡುತ್ತಿರುವ ಪಹಣಿಗಳು ನನ್ನ ತಂದೆಗೆ ಸೇರಿದ ಆಸ್ತಿಗಳು ಎಂದರೆ ಸರಿ. ಸದರಿ ಪಹಣಿಗಳನ್ನು ಎಂ.ವಿ.ಸಿ.ನಂ.707/2019 ರಲ್ಲಿ ನಿಪಿ-17 ರಿಂದ 20 ಎಂದು ಗುರುತಿಸಲಾಗಿದೆ.

**4.** ಅಪಘಾತವಾದ ನಂತರ ಟಿಪ್ಪರ್ ಲಾರಿಯನ್ನು ಯಾರು ಬಿಡಿಸಿಕೊಂಡಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆ ದಾಖಲೆಯೊಂದನ್ನು ತೋರಿಸಿ ಅದನ್ನು ನನ್ನ ತಂದೆಯೇ ಬಿಡಿಸಿಕೊಂಡಿರುತ್ತಾರೆ ಹಾಗೂ ಅದರಲ್ಲಿ ನನ್ನ ತಂದೆಯ ಸಹಿ ಇರುತ್ತದೆ ಎಂದರೆ ಸಾಕ್ಷಿ ಸಹಿಯನ್ನು ಒಪ್ಪಿಕೊಂಡಿದ್ದು, ಸದರಿ ದಾಖಲೆಯನ್ನು ಎಂ.ವಿ.ಸಿ.ನಂ.707/2019 ರಲ್ಲಿ ನಿಪಿ-21 ಎಂದು ಗುರುತಿಸಲಾಗಿದೆ. ಈಗ ನೋಡುತ್ತಿರುವ ಫೋಟೋದಲ್ಲಿ ನನ್ನ ತಂದೆಯ ಭಾವಚಿತ್ರ ಇರುತ್ತದೆ ಎಂದರೆ ಸರಿ, ಸದರಿ ಫೋಟೋವನ್ನು ಎಂ.ವಿ.ಸಿ.ನಂ.707/2019 ರಲ್ಲಿ ನಿಪಿ-22 ಎಂದು ಗುರುತಿಸಲಾಗಿದೆ. ಪೊಲೀಸರು ನೀಡಿದ ನೋಟೀಸಿಗೆ ನನ್ನ ತಂದೆ ಉತ್ತರ ನೀಡಿ, ಅದರಲ್ಲಿ 2ನೇ ಎದುರುದಾರರು ವಾಹನ ಚಾಲನೆ ಮಾಡುತ್ತಿದ್ದರು ಎಂದು ಒಪ್ಪಿಕೊಂಡಿದ್ದು, ಈಗ ನೋಡುತ್ತಿರುವ ದಾಖಲೆಗಳು ಪೊಲೀಸರ ನೋಟೀಸ್ ಮತ್ತು ನನ್ನ ತಂದೆ ನೀಡಿದ ಉತ್ತರದ ದೃಢೀಕೃತ ಪ್ರತಿ ಎಂದರೆ ಸರಿ. ಸದರಿ

ದಾಖಲೆಗಳನ್ನು ಎಂ.ವಿ.ಸಿ.ನಂ.707/2019 ರಲ್ಲಿ ನಿಪಿ-23 ಮತ್ತು 24 ಎಂದು ಗುರುತಿಸಲಾಗಿದೆ.

**5.** ನಾನು ಹೇಳಿದಂತೆ ನನ್ನ ತಂದೆ ಸದರಿ ಲಾರಿಯನ್ನು 2ನೇ ಎದುರುದಾರರಿಗೆ ಮಾರಾಟ ಮಾಡಿದ್ದರೇ 2ನೇ ಎದುರುದಾರರು ಲಾರಿಯನ್ನು ಪೊಲೀಸರಿಂದ ಬಿಡುಗಡೆ ಮಾಡಿಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಆಸ್ತಿಯನ್ನು ನಾನು ನಿರ್ವಹಿಸುತ್ತಿರುವ ಕಾರಣ ಅರ್ಜಿಯಲ್ಲಿ ಕೇಳಿದಂತೆ ಪರಿಹಾರ ಕೊಡಲು ಭಾದ್ಯ ಎಂದರೆ ಸರಿಯಲ್ಲ. ಸಾಧ್ಯವಾದರೇ ಪರಿಹಾರ ಕೊಡುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಉದ್ದೇಶಕ್ಕಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**